# ಇನ್ನೊಂದೇ ದಾರಿಯಲ್ಲಿ ಸಾಗುವ ಜಯರಾಮ

## ಶಿವರಾಮ ಕಾರಂತರ ಕಾದಂಬರಿಯ ವಿಭಿನ್ನ ಪಾತ್ರದ ನೆನಪುಗಳು



**ಶ್ರೀಮತಿ ದೇವಿ ಪಿ.**
ಕಲೆ: ಎಸ್.ವಿ. ಹೂಗಾರ್

ಇತ್ತೀಚೆಗೆ ಓದಿದ ಕಾದಂಬರಿಗಳ ಪೈಕಿ ವಿಶೇಷವಾದ ಪರಿಸರ ಪ್ರಜ್ಞೆ, ಕಾಡು ಮೇಡು, ತೋಟ ಗದ್ದೆಗಳ ಆವರಣ, ಕೌಟುಂಬಿಕ ಚಿತ್ರಣ, ಆಪ್ತವಾದ ಸನ್ನಿವೇಶ-ಪಾತ್ರಗಳೊಂದಿಗೆ ಹಲವಾರು ವೈಚಾರಿಕ ತಾಕಲಾಟ, ಜಿಜ್ಞಾಸೆಗಳ ಮೂಲಕ ಹತ್ತಿರವಾದ ಕೃತಿ ಡಾ.ಶಿವರಾಮ ಕಾರಂತರ 'ಇನ್ನೊಂದೇ ದಾರಿ'. ಕಾರಂತರ ಜನಪ್ರಿಯ ಕಾದಂಬರಿಗಳ ಪಟ್ಟಿಯಲ್ಲಿ ಅಷ್ಟಾಗಿ ಕಾಣಿಸಿಕೊಳ್ಳದ ಈ ಕೃತಿ 1968ರಲ್ಲಿ ಪ್ರಕಟವಾದದ್ದು. ಈ ಕಾದಂಬರಿಯಲ್ಲಿ ಬರುವ ಜಯರಾಮನ ಪಾತ್ರ ಅವನ ವಿಭಿನ್ನ ವ್ಯಕ್ತಿತ್ವದ ದೆಸೆಯಿಂದಲಾಗಿ ನನ್ನ ಮನಸ್ಸಿನಲ್ಲಿ ಆಗಾಗ ಹಾದುಹೋಗುವಂಥದ್ದು.

ಲೇಖಕರೇ ಮುನ್ನುಡಿಯಲ್ಲಿ ಬರೆಯುವಂತೆ, ಇಲ್ಲಿ 'ಸಂದ ತಲೆಮಾರೊಂದರ ಚಿತ್ರದ ಜೊತೆ, ಅಲ್ಲಿಂದಲೇ ಹುಟ್ಟಿ ಬೆಳೆದ ಹೊಸ ಪ್ರಜ್ಞೆಯ ಇನ್ನೊಂದು ದೃಷ್ಟಿಯಿದೆ'. ಅಂತೆಯೇ ಕಾದಂಬರಿಯ ಮೊದಲರ್ಧದಲ್ಲಿ ಬಹಳ ಮುಖ್ಯಳಾಗಿ ಕಾಣಿಸಿಕೊಂಡು ಹೋರಾಟದ ಬದುಕಿನೊಂದಿಗೆ ತನ್ನ ವಿಚಾರ ಸರಣಿಯನ್ನು ಮುಂದಿಡುತ್ತಾ ಓದುಗರ ಮನೋಭೂಮಿಕೆಯನ್ನು ಆವರಿಸಿಕೊಳ್ಳುವವಳು ಹೊನ್ನಜ್ಜಿ. ಕಾದಂಬರಿಯ ಮೊದಲರ್ಧದಲ್ಲಿ ಹೊನ್ನಜ್ಜಿಯ ಬದುಕಿನ ದಟ್ಟ ಕಥೆಗಳು ಮನಕಲುಕುತ್ತವೆ. ಅದೇ ಹೊನ್ನಜ್ಜಿಯ ಮೊಮ್ಮಗ ಜಯರಾಮ, ಕಾದಂಬರಿಯ ಉಳಿದರ್ಧ ಭಾಗದಲ್ಲಿ ಓದುಗರ ಗಮನ ಸೆಳೆಯುತ್ತಾನೆ. ಹೆಚ್ಚಾಗಿ ಚರ್ಚೆ ನಡೆಯುವಾಗ ಆಗುವ ಮುಖಾಮುಖಿ ಮಾತುಕತೆ ಹೊನ್ನಜ್ಜಿ ಮತ್ತು ಜಯರಾಮರ ಮಧ್ಯೆ ಎಲ್ಲಿಯೂ ನಡೆಯುವುದಿಲ್ಲವಾದರೂ, ಕಥೆಯ ಘಟನಾವಳಿಗಳೊಂದಿಗೆ ಬೆಸೆದುಕೊಂಡು ಸಾಗುವ ಇವರಿಬ್ಬರ ಆಲೋಚನಾ ವಿಧಾನ ಆಸಕ್ತಿಕರವಾದದ್ದು.

ಮನೆಯ ಸಂಸ್ಕಾರ ಹಾಕಿಕೊಟ್ಟ ದಾರಿಯಲ್ಲಿ ಸಾಗುವ ಅಥವಾ ಸಮಾಜದ ನಿರೀಕ್ಷೆಯಂತೆ ಸಿದ್ಧ ಮಾದರಿಯನ್ನು ಅನುಸರಿಸುವ ದಾರಿ ಲೋಕರೂಢಿಯಲ್ಲಿ ಒಂದೆಡೆ ಕಾಣಿಸಿದರೆ, ಯಾರನ್ನೂ ಅನುಸರಿಸದೆ, ತಪ್ಪು-ಸರಿಗಳ ಬಗ್ಗೆ ಹೆಚ್ಚು ಯೋಚಿಸುವ ಗೋಜಿಗೆ ಹೋಗದೆ ತನಗೆ ಕಂಡಂತೆ ಸಾಗುವ ದಾರಿ ಇನ್ನೊಂದೆಡೆ ಗೋಚರಿಸುತ್ತದೆ. ಮೊದಲನೆಯ ದಾರಿಯಲ್ಲಿ ಹೆಜ್ಜೆ ಹೆಜ್ಜೆಗೆ ಮಾರ್ಗದರ್ಶನ ಮಾಡುವ ಹಿರಿಯರು ನಡೆದು ಬಂದ ರೀತಿಯಿರುತ್ತದೆ. ಎಡವಿದಲ್ಲಿ ಸಾವರಿಸಿಕೊಂಡು ಮುಂದೆ ಹೋಗಲು ಪುರಾಣ, ಚರಿತ್ರೆಗಳ ಕಥೆಗಳ ಆಧಾರವಿರುತ್ತದೆ. ಎರಡನೆಯ ರೀತಿಯಲ್ಲಿ ಸಿದ್ಧ ಮಾದರಿ ಇರುವುದಿಲ್ಲವಾದ ಕಾರಣ, ತಾನು ತೆಗೆದುಕೊಳ್ಳಬೇಕಾದ ನಿರ್ಣಯ, ಸಾಗಬೇಕಾದ ಹಾದಿಯ ಕುರಿತು ಸ್ಪಷ್ಟವಾದ ವೈಯಕ್ತಿಕ ಅಭಿಪ್ರಾಯವಿರಬೇಕಾಗುತ್ತದೆ. ಈ ತೀರ್ಮಾನದಿಂದ ಮುಂದೆ ಎದುರಿಸಬೇಕಾಗಿ ಬರುವ ಎಲ್ಲಾ ಒಳಿತು ಕೆಡುಕುಗಳಿಗೂ ಆತ ಸಿದ್ಧನಾಗಿರಬೇಕಾಗುತ್ತದೆ. ಈ ನಿಟ್ಟಿನಲ್ಲಿ 'ಇನ್ನೊಂದೇ ದಾರಿ'ಯಲ್ಲಿ ಬರುವ ಜಯರಾಮ, ತನ್ನ ಓದು, ಅನುಭವ, ವಿವೇಚನೆಗೆ